VK
ವಿಜಯ ಕರ್ನಾಟಕ

Sunday May 7th 2017, Namma Bengaluru III

ಭಾನುವಾರ,7 ಮೇ 2017 ನಮ್ಮ ಬೆಂಗಳೂರು III

# ಆರ್.ವಿ. ಕಾಲೇಜಿನಲ್ಲಿ ತಾಂತ್ರಿಕ ಮೇಳ

**ವಿಕ ಸುದ್ದಿಲೋಕ** ಬೆಂಗಳೂರು

ನಗರದ ಆರ್‌ವಿ ಎಂಜಿನಿಯರಿಂಗ್ ಆ್ಯಂಡ್ ಟೆಕ್ನಾಲಜಿ ಕಾಲೇಜಿನಲ್ಲಿ ಮೇ 26ರಿಂದ 28ರವರೆಗೆ ರಾಜ್ಯಮಟ್ಟದ ಬೃಹತ್ ತಾಂತ್ರಿಕ ಮೇಳ 'ಸೃಷ್ಟಿ' ನಡೆಯಲಿದೆ.

ಶನಿವಾರ ಈ ಕುರಿತು ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಎಬಿವಿಪಿ ಕಾರ್ಯದರ್ಶಿ ಹರ್ಷ ನಾರಾಯಣ್ ''ಎಬಿವಿಪಿ ಹಾಗೂ ವಿಎಸ್‌ಎಸ್ ಟ್ರಸ್ಟ್ ಸಹಯೋಗದಲ್ಲಿ ಈ ತಾಂತ್ರಿಕ ಮೇಳ ನಡೆಯಲಿದೆ. ಈ ಬಾರಿಯ ಸೃಷ್ಟಿ ಮೇಳವು 'ನನ್ನ ದೇಶ - ನನ್ನ ಸಂಸ್ಕೃತಿ' ಎಂಬ ಘೋಷ ವಾಕ್ಯದ ಮೂಲಕ ಎಂಜಿನಿಯರಿಂಗ್ ಕಾಲೇಜಿನ ಅಂತಿಮ ವರ್ಷದ ವಿದ್ಯಾರ್ಥಿಗಳಿಗಾಗಿ ಆಯೋಜಿಸಲಾಗಿದೆ. ವಿದ್ಯಾರ್ಥಿಗಳಿಗಾಗಿ ನೂರಾರು ನೂತನ ಯೋಜನೆ(ಪ್ರಾಜೆಕ್ಟ್ ವರ್ಕ್) ಕೈಗೆತ್ತಿಕೊಳ್ಳಲಾಗುತ್ತಿದೆ. ಅವರು ತಮ್ಮ ಉತ್ತಮ ಪ್ರಾಜೆಕ್ಟ್‌ಗಳನ್ನು ರಾಜ್ಯಮಟ್ಟದಲ್ಲಿ ಗಮನ ಸೆಳೆಯಲು ಇದೊಂದು ಉತ್ತಮ ವೇದಿಕೆಯಾಗಲಿದೆ,'' ಎಂದು ಹೇಳಿದರು. ಇದೇ ವೇಳೆ ಸೃಷ್ಟಿ - 2017ರ ಪೋಸ್ಟರ್ ಬಿಡುಗಡೆ ಮಾಡಲಾಯಿತು. ಸೃಷ್ಟಿ ಕಾರ್ಯಕರ್ತೆ ಮಂದಾರ ಮತ್ತಿತರರು ಸುದ್ದಿಗೋಷ್ಠಿಯಲ್ಲಿ ಇದ್ದರು.

ವೇಸ್ಟ್‌ಮೇನಿಯಾ ಎಂಬ ಹೆಸರಿನಲ್ಲಿ ಅನುಪಯುಕ್ತ ವಸ್ತುಗಳಿಂದ ಮಾಡಿದಂತಹ ಮಾಡಲ್‌ಗಳ ಪ್ರದರ್ಶನವೂ ಈ ಮೇಳದಲ್ಲಿ ಇರಲಿವೆ. ಎಂಜಿನಿಯರಿಂಗ್ ವಿದ್ಯಾರ್ಥಿಗಳು ಪ್ರತಿ ವರ್ಷ ಸುಮಾರು 30 ಕೋಟಿ ರೂ.ನಷ್ಟು ಹಣವನ್ನು ಇದಕ್ಕೆ ವ್ಯಯ ಮಾಡುತ್ತಾರೆ.

## 'ಕಸದಿಂದ ರಸ ಸ್ಪರ್ಧೆ'

ಈ ವೇಳೆ ಸೆಮಿನಾರ್ ಸ್ಪರ್ಧೆ, ಕಲಾ ವಿದ್ಯಾರ್ಥಿಗಳಿಗಾಗಿ ಆರ್ಟ್ ಮ್ಯಾಟರ್ಸ್ ಚಿತ್ರಕಲಾ ಪ್ರದರ್ಶನ, ಶಿಲ್ಪಕಲೆ, ಪೋಸ್ಟರ್ ಡಿಸೈನ್, ಛಾಯಾಚಿತ್ರ, ಕಿರುಚಿತ್ರ, ಅನಿಮೇಶನ್ ಮುಂತಾದ ಸ್ಪರ್ಧೆಗಳು ನಡೆಯಲಿವೆ. ಪರಿಸರ ಜಾಗೃತಿಗಾಗಿ ಸ್ಟೂಡೆಂಟ್ ಫಾರ್ ಡೆವಲಪ್‌ಮೆಂಟ್ ಬೀದಿ ನಾಟಕ, ಪೋಸ್ಟರ್ ಪ್ರೆಸೆಂಟೇಶನ್, ಕಸದಿಂದ ರಸ ಎಂಬ ಸ್ಪರ್ಧೆಗಳನ್ನು ಏರ್ಪಡಿಸಲಾಗಿದೆ. ಆಸಕ್ತರು ಮಾಹಿತಿಗೆ ದೂ.ಸಂ. 94498 35645 ಸಂಪರ್ಕಿಸಬಹುದು.

## ತಂತ್ರಜ್ಞರೊಡನೆ ಸಂವಾದ

ಮೇಳದಲ್ಲಿ 3 ಸಾವಿರ ವಿದ್ಯಾರ್ಥಿ ಪ್ರತಿನಿಧಿಗಳು, 300 ಅಧ್ಯಾಪಕರು, 100ಕ್ಕೂ ಹೆಚ್ಚು ವಿಜ್ಞಾನಿಗಳು ಮತ್ತು ಸಾರ್ವಜನಿಕರು ಭಾಗವಹಿಸಲಿದ್ದಾರೆ. ತಂತ್ರಜ್ಞರೊಡನೆ ಸಂವಾದ ರಾಷ್ಟ್ರೀಯ ವಿಚಾರದ ಕುರಿತು ಚರ್ಚೆ ನಡೆಯಲಿದೆ. ಎಂಜಿನಿಯರಿಂಗ್ ವಿಭಾಗದ ಮೊದಲ, ಎರಡನೇ ಮತ್ತು ಮೂರನೇ ಬಹುಮಾನವಾಗಿ 10 ಸಾವಿರ ಮತ್ತು 8 ಸಾವಿರ, 6 ಸಾವಿರ ರೂ. ನಿಗದಿಪಡಿಸಲಾಗಿದೆ. ಸ್ಪರ್ಧೆಯಲ್ಲಿ ಹೆಚ್ಚು ಅಂಕಗಳಿಸುವ ವಿದ್ಯಾರ್ಥಿಗಳಿಗೆ 'ಸೃಷ್ಟಿ2017 ಚಾಂಪಿಯನ್‌ಶಿಪ್ ಟ್ರೋಫಿ' ಸಿಗಲಿದೆ.

Scanned by CamScanner